# ಸಲ್ಮಾನ್ ಖಾನ್ ಕಾಲೆಳೆದ ನಾಸಿರುದ್ದೀನ್ ಷಾ





ಕೊರೊನಾ ವೈರಸ್‌ನಿಂದಾಗಿ ಥಿಯೇಟರ್‌ಗಳು ಬಾಗಿಲು ಮುಚ್ಚಿ ಐದು ತಿಂಗಳುಗಳೇ ಉರುಳಿದವು. ನೂರು ಇನ್ನೂರು ನಾಲ್ಕುನೂರು ಕೋಟಿಗಳೆಂದು ಬಜೆಟ್‌ಗಳನ್ನು ಜಗದಗಲ ಹರಡಿ ಕುಳಿತಿದ್ದ ನಿರ್ಮಾಪಕರೆಲ್ಲ ಕೈ ಕೈ ಹಿಚುಕಿಕೊಳ್ಳುತ್ತಿದ್ದಾರೆ. ಆರಂಭದಲ್ಲಿ ಈ ನಿರ್ಮಾಪಕರಿಗೆ ಸಾಥ್ ನೋಡಿ, ಥಿಯೇಟರ್‌ಗಳ ತೆರೆಯುವಿಕೆಗೆ ಕಾಯಲು ಸಿದ್ಧರಿದ್ದ ಮಹಾತಾರೆಯರು ನಿಶ್ಚಿಂತೆಯಿಂದ ಇದ್ದರು. ಆದರೆ ಥಿಯೇಟರ್‌ಗಳನ್ನು ನಂಬಿದರೆ ಇಡೀ ವರ್ಷವೇ ಸಿನಿಮಾಗಳಿಲ್ಲದೆ ಉರುಳಿ ಹೋಗುವ ಭಯ ಈಗ ಹೀರೋಗಳನ್ನೂ ಆವರಿಸಿದೆ. ಅದಕ್ಕೆಂದೇ ಅವರು ಪ್ರತಿಷ್ಠೆ ಬಿಟ್ಟು ಓಟಿಟಿ ಪ್ಲಾಟ್‌ಫಾರ್ಮ್ ಕಡೆಗೆ ಕಣ್ಣು ಮಿಟುಕಿಸತೊಡಗಿದ್ದಾರೆ. ಅಕ್ಷಯ ಕುಮಾರ್ ಮತ್ತು ಅಜಯ ದೇವಗನ್ ಈ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಅಮಿತಾಭ್ ಮತ್ತು ಆಯುಷ್ಮಾನ್ ಖುರಾನಾ ನಟಿಸಿದ 'ಗುಲಾಬೊ ಸಿತಾಬೊ' ಸಿನಿಮಾ ಎಲ್ಲರೂ ಯೋಚಿಸುವುದಕ್ಕಿಂತ ಮುಂಚೆಯೇ ಓಟಿಟಿಯಲ್ಲಿ ಬಂದು ಸಾಕಷ್ಟು ಸುದ್ದಿ ಮತ್ತು ದುಡ್ಡನ್ನೂ ಮಾಡಿತು. ಈಗ ಅಕ್ಷಯ ಕುಮಾರ್ ನಟಿಸಿದ 'ಲಕ್ಷ್ಮೀ ಬಾಂಬ್' ಮತ್ತು ಅಜಯ್ ದೇವಗನ್ ನಟಿಸಿದ 'ಭುಜ್: ದಿ ಪ್ರೈಡ್ ಆಫ್ ಇಂಡಿಯಾ' ಕೂಡಾ ಓಟಿಟಿ ರಂಗಸಜ್ಜಿಕೆಗೆ ಸಿದ್ಧವಾಗಿದೆ.

ಓಟಿಟಿ ಪ್ಲಾಟ್‌ಫಾರಂನಿಂದ ಸಾಮಾನ್ಯ ನಿರ್ಮಾಪಕರಿಗೆ ಮತ್ತು ಪ್ರತಿಭಾವಂತ ತಂತ್ರಜ್ಞರಿಗೆ ಲಾಭವೇ ಆಗಿದೆ. ಥಿಯೇಟರ್‌ಗಳನ್ನು ನಂಬಿ, ಭಾರೀ ಬಜೆಟ್‌ಗಳ ಹೊರೆ ಏರಿಸಿಕೊಂಡು ಜೂಜಾಡುವುದು ತಪ್ಪಿದೆ ಎನ್ನುವುದು ಬಹುತೇಕರ ಅಂಬೋಣ. ಹಿರಿಯ ನಟ ನಾಸಿರುದ್ದೀನ್ ಷಾ, ಇದನ್ನು ಬಹಿರಂಗವಾಗಿಯೇ ಆಡಿ ತೋರಿಸಿದ್ದಾರೆ. ಜೊತೆಗೆ ಸೂಪರ್‌ಸ್ಟಾರ್‌ಗಳ ಕಾಲೆಳೆದಿದ್ದಾರೆ. 'ಸಲ್ಮಾನ್ ಖಾನ್ ಸಿನಿಮಾವೊಂದು ಓಟಿಟಿಯಲ್ಲಿ ಬಿಡುಗಡೆಯಾದರೆ ಆತನ ಅಭಿಮಾನಿಗಳು ಥಿಯೇಟರ್‌ನಲ್ಲಿ ಮಾಡಿದಂತೆಯೇ ಮನೆಯಲ್ಲೂ ಸಿಳ್ಳೆ ಹೊಡೆದು ಡ್ಯಾನ್ಸ್ ಮಾಡಬಹುದೆ?' ಎಂದು ನಾಸಿರುದ್ದೀನ್ ಷಾ ಅಚ್ಚರಿ ವ್ಯಕ್ತಪಡಿಸಿದ್ದಾರೆ.

'ಲಾಕ್‌ಡೌನ್‌ನಿಂದ ಉತ್ತಮ ಸಿನಿಮಾ ಮಾಡುವವರಿಗೆ ಲಾಭವೇ ಆಗಿದೆ' ಎನ್ನುವುದು ನಾಸಿರುದ್ದೀನ್ ಅಭಿಪ್ರಾಯ. 'ಕುತೂಹಲಕರ ಹಾಗೂ ಅತ್ಯುತ್ತಮ ಚಿತ್ರಕಥೆಗಳುಳ್ಳ ನಿರ್ದೇಶಕರಿಗೆ ಓಟಿಟಿ ವರವೇ ಆಗಿದೆ. ದೊಡ್ಡ ಬಜೆಟ್‌ನ ಬೆನ್ನುಹತ್ತುವ ನಿರ್ಮಾಪಕರ ಮನೆ ಮುಂದೆ ಕ್ಯೂ ನಿಲ್ಲುವ ಅಗತ್ಯ ಈಗ ಇಲ್ಲ. ತಮ್ಮ ಚಿತ್ರಕಥೆಗೆ ಸೂಕ್ತವಾಗುವ ನಟರನ್ನು ಹಾಕಿಕೊಳ್ಳಬಹುದು. ಅದಕ್ಕಾಗಿ ದುಡ್ಡಿನ ದಣಿಗಳನ್ನು ಕಾಯುವ ಅಗತ್ಯವೂ ಇಲ್ಲ. ಓಟಿಟಿ ಯಲ್ಲಿ ಬರುವ ಸಿನಿಮಾಗಳ ಬಗ್ಗೆ ಪ್ರೇಕ್ಷಕರು ಈಗಿನಂತೆಯೇ ಪ್ರೋತ್ಸಾಹ ನೀಡಿದರೆ, ಇನ್ನು ಮುಂದೆ 500–600 ಕೋಟಿಯ ಬಜೆಟ್‌ಗಳೆಲ್ಲ ಹಳೇ ಕಥೆಯಾಗಲಿದೆ' ಎಂದಿದ್ದಾರೆ ನಾಸಿರುದ್ದೀನ್ ಷಾ.

# ಜಾಹ್ನವಿ ಕಹಿಸತ್ಯ



ಸುಶಾಂತ್‌ಸಿಂಗ್ ಸಾವಿನ ತನಿಖೆಯ ಕುರಿತು ಪ್ರತಿದಿನವೂ ಹತ್ತಾರು ಕಥೆಗಳು ಹುಟ್ಟಿಕೊಳ್ಳುತ್ತಿವೆ. ಅದರ ಸತ್ಯಾಸತ್ಯತೆ ಏನೇ ಇದ್ದರೂ, ಆ ಪ್ರಕರಣದಿಂದ ಉಂಟಾದ ಸ್ವಜನಪಕ್ಷಪಾತದ ಚರ್ಚೆಯಂತೂ ಬಾಲಿವುಡ್‌ನಲ್ಲಿ ಜೋರಾಗಿ ನಡೆದಿದೆ. ತಾರೆಯರ ಮಕ್ಕಳಿಗೆ ವಿಶೇಷ ಅವಕಾಶಗಳು ಸಿಗುತ್ತವೆ, ಇದರಿಂದ ಪ್ರತಿಭಾವಂತ ಹೊಸಬರಿಗೆ ಅನ್ಯಾಯ ಆಗುತ್ತದೆ ಎನ್ನುವುದು ಈ ಚರ್ಚೆಯಲ್ಲಿ ಹೆಚ್ಚಿನ ಪ್ರೇಕ್ಷಕರ ಅಂಬೋಣ.

ಆದರೆ ಶ್ರೀದೇವಿ ಮಗಳು ಜಾಹ್ನವಿ ಈ ವಾದವನ್ನು ಒಪ್ಪುವುದಿಲ್ಲ. ಸಂದರ್ಶನವೊಂದರಲ್ಲಿ ಆಕೆ ತನ್ನದೇ ಉದಾಹರಣೆಯನ್ನು ನೀಡಿದ್ದಾಳೆ. 'ಹಿಂದೆ ಧರ್ಮ ಪ್ರೊಡಕ್ಷನ್‌ರವರ ಸಿನಿಮಾವೊಂದಕ್ಕೆ ನಾನು ಆಡಿಷನ್‌ಗೆ ಹೋಗಿದ್ದೆ. ಆದರೆ ನನ್ನನ್ನು ರಿಜೆಕ್ಟ್ ಮಾಡಲಾಯಿತು. ಸ್ವತಃ ನಿರ್ದೇಶಕ ಕರಣ್ ಜೋಹರ್ ಅವರೇ ರಿಜೆಕ್ಟ್ ಆದ ಸುದ್ದಿಯನ್ನು ನನಗೆ ತಿಳಿಸಿದರು. ಅವರು ನೀಡಿದ ಕಾರಣವೆಂದರೆ ನಾನು ತೀರಾ ಎಳೆಯ ವಯಸ್ಸಿನವಳಾಗಿದ್ದೇನೆ ಎನ್ನುವುದು. ಈ ಬಗ್ಗೆ ನನಗೆ ದುಃಖವೇನೂ ಇಲ್ಲ' ಎಂದಿದ್ದಾಳೆ ಜಾಹ್ನವಿ. ಗುಂಜನ್ ಸಕ್ಸೇನಾ ಸಿನಿಮಾದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸ್ವಜನಪಕ್ಷಪಾತದ ಆಯ್ಕೆ ಎಂದು ಕೆಲವರು ಟೀಕೆ ಮಾಡಿದಾಗ ಜಾಹ್ನವಿಗೆ ಮತ್ತು ಆಕೆಯ ಅಪ್ಪ ನಿರ್ಮಾಪಕ ಬೋನಿ ಕಪೂರ್‌ಗೆ ಬೇಸರವೇನೂ ಆಗಲಿಲ್ಲವಂತೆ. 'ಈ ಸಿನಿಮಾದಲ್ಲಿ ನನ್ನ ನಟನೆಯ ಸಾಮರ್ಥ್ಯದ ಬಗ್ಗೆ ಅಪ್ಪನಿಗೆ ಹೆಮ್ಮೆ ಅನ್ನಿಸಿತು. ಹಾಗಾಗಿ ಅವರೂ ಟೀಕೆಗೆ ತಲೆ ಕೆಡಿಸಿಕೊಳ್ಳಲಿಲ್ಲ' ಎಂದಿದ್ದಾಳೆ. ಈಗ ಜಾಹ್ನವಿ 'ದೋಸ್ತಾನಾ 2' ಮತ್ತು 'ತಖ್ತ್' ಸಿನಿಮಾಗಳಲ್ಲೂ ಪ್ರೌಢ ಅಭಿನಯ ನೀಡಿರುವ ಮಾತುಗಳು ಕೇಳಿಬಂದಿವೆ. 'ಕೆಲವು ಸತ್ಯಗಳು ನಿಮಗೆ ಕಹಿ ಅನ್ನಿಸಬಹುದು. ಆದರೆ ಸತ್ಯವನ್ನು ನಿರಾಕರಿಸಲಾಗದು' ಎಂದಿದ್ದಾಳೆ ಆಕೆ.

■ ಬಿಂದು